ಮಾಡಿಕೊಂಡನೋ ಹೇಗೆ? ಅಕಸ್ಮಾತ್ ನೋಡಿದ್ದೇ ಆದಲ್ಲಿ ಅವಿಸ್ಮರೆಯನ್ನು ನೋಡಿದ್ದಾನು. ಅನಘೆಯನ್ನು ನೋಡಿರುವ ಸಾಧ್ಯತೆಯೇ ಇರಲಿಕ್ಕಿಲ್ಲ. ಇನ್ನು, ಈ ಮಿಹಿಕಾ ಈಗಿತ್ತಲಾಗಿನವಳಷ್ಟೆ? ಅಂದಮೇಲೆ ಅವನ ಮಾತನ್ನು ನಂಬಲುಂಟೇ?

ಮನಸಿನೊಳಗೆ, ಹೀಗೆಲ್ಲ, ಹತ್ತೆಂಟು ಲೆಕ್ಕಿಸಿದ್ದೆನಷ್ಟೆ, ಎಲ್ಲಿದ್ದಳೋ ಏನೋ – ಯಾವೊಬ್ಬಳೋ ಹೆಣ್ಣು ಇದ್ದಕ್ಕಿದ್ದಂತೆ ಕಣ್ಣೆದುರು ಮೂಡಿದಳು. ಗಾಳಿಯೇ ತನ್ನೊಳವನ್ನೆಲ್ಲ ಕಲಕಿ–ಕುಲುಕಿ ಇಳಿಸಿತೆಂಬಂತೆ ತಳೆದು ತೋರಿದಳು. 'ಸ್ಸ್ ಸ್ಸಾರೀ ಕಣೋ...' ಅಂತಂದಳು. 'ಏನೋ ಗೊತ್ತಾಗಲಿಲ್ಲ. ಆ ಹೊತ್ತೇ ಹಾಗಿತ್ತೂಂದುಕೋ. ಒಂದೇ ಸಮ ಮನೇಲಿರೂಂದರೆ ಯಾರಿಂದ ಸಾಧ್ಯಾನೋ? ಡಿಪ್ರೆಸ್ಸಿಂಗ್ ಅಲ್ಲವಾ? ಅಥವಾ, ಎಷ್ಟು ಹೊತ್ತೂಂತ ನೀನು ನನ್ನ, ನಾನು ನಿನ್ನ ನೋಡಿಕೊಂಡಿರೋದು ಹೇಳು. ಈವಾಗ ನೋಡಿದರೆ ಇನ್ನೂ ಒಂದು ಲಾಕ್‌ಡೌನ್ ಅನ್ನುತಾರಲ್ಲೋ... ಥೂ... ಮನೇಲಿದ್ದು ಇದ್ದು ಸುಸ್ತಾಗಿಬಿಟ್ಟೆ ಕಣೋ, ಶಕ್ತೀ. ಏನೂ ಮಾಡದೆ ಸುಮ್ಮನಿರೋದೂ ಒಂದು ಜಡ್ಡಲ್ಲವೇನೋ? ಅಲ್ಲದೆ, ಹೊರಗೆ – ಹುಳಬಿದ್ದ ಹಾಗೆ ಜನ ಸಾಯುತಾ ಇದ್ದಾರಲ್ಲೋ. ನಾಳೆ ನಾನೂ ನೀನೂ ಈ ಮಾರೀಗೆ ಬಲಿಯಾಗಬಹುದಲ್ಲವೇನೋ? ತುಂಬಾ ಭಯ ಆಗುತಿದೆಯೋ, ಶಕ್ತೀ. ವಾಪಸು ಬರುತೀನೋ... ಇಲ್ಲ ಅನ್ನಬೇಡವೋ. ಪ್ಲೀಸ್ ಟೇಕ್ ಮೀ ಹೋಮ್. ಪ್ಲೀಸ್... ಟೆಲ್ ಮಿ – ವಿಲ್ಯೂ?'

'ಮಿ... ಮಿ... ಮಿಹೀ...' ಹೆಸರೆತ್ತಲಿಕ್ಕೂ ಗೊತ್ತಾಗದೆ ತಡವರಿಸುತ್ತಿರುವಾಗ, ಏನಾಯಿತೆಂದು ಗೊತ್ತಾಗುವ ಮುನ್ನವೇ – ಹೆಣ್ಣು ನನ್ನನ್ನು ಅಪ್ಪಿಕೊಂಡು ಮೋರೆಯನ್ನೆಲ್ಲ ಮುದ್ದಿಸಿದಳು.

ದೇವರೇ... ಈ ಹೆಣ್ಣು ಮಾಸ್ಕು ಸಹ ತೊಟ್ಟಿಲ್ಲವೇ? ಈಗೇನು ಗತಿ... ಅಂದುಕೊಂಡೆ.

'ಮನೆಗೆ ಕರಕೊಂಡು ಹೋಗುತಿ ಅಲ್ಲವೇನೋ? ಹೇಳೋ...'

'ಅಲ್ಲಾ, ಮಿಹೀ, ಬಿಟ್ಟು ಹೊರಟಿದ್ದು ನೀನು. ಯಾಕೆ ಹೋದೇಂತ ಸಹ ಹೇಳಲಿಲ್ಲಾ...' ಹೆಣ್ಣನ್ನು ಅಪ್ಪುಗೆಯೊಳಗೆ ತಳೆದುಕೊಂಡೇ ಕೇಳಿದೆ.

'ಅಲ್ಲವೋ, ಈ ದೇಶದಲ್ಲಿ ಮೊದಲ ಲಾಕ್‌ಡೌನಿಗೆ ಕಾರಣ ಕೊಡಲಾಯಿತೇನೋ, ಶಕ್ತೀ? ಅಥವಾ, ಆ ಮುನ್ನದ ಅಪನಗದೀಕರಣಕ್ಕೆ? ಯಾಕೋ ತುಂಬಾ ಭಯ ಆಗುತಿದೆಯೋ...'

ಈ ಹೆಣ್ಣಿನ ಬೆನ್ನುತಡವುತ್ತಲೇ ಲೌಂಜಿನಲ್ಲಿ ಅವಿಸ್ಮರೆಯೋ ಅನಘೆಯೋ ಇರಬಹುದೇ ಎಂದು ಲೆಕ್ಕಿಸಿದೆ. ಲೌಂಜಿನ ಮುಂಗಾಜಿನಾಚೆಗೆ ಕರ್ನಲ್ ಚಾರಿ ಕಾರೇರಿ ಹೊರಟಿದ್ದು ತೋರಿಬಂತು. ಅದು ಆತನೇ ಎಂಬ ಖಾತ್ರಿಯನ್ನು ಅವನು ಮುಸುಡಿಯಲ್ಲಿನ ಕೇಸರಿಬಣ್ಣ ತೋರಿ ಘೋಷಿಸಿತು.

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ವಾಸ್ತುಶಿಲ್ಪಿ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ', '90 ಡಿಗ್ರಿ', '180 ಡಿಗ್ರಿ' ಎಂಬ ಕಥಾಸಂಕಲನಗಳನ್ನು, 'ಮಡಿಲು', 'ಅರ್ಬನ್ ಪ್ಯಾಂಥರ್' ಎಂಬ ನೀಳ್ಗತೆಗಳನ್ನು, 'ಬಣ್ಣದ ದಂಗೆ', 'ಪ್ರಿಯೇ ಚಾರುಶಿಲೆ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಕಮಾನು – ಕಟ್ಟುಕತೆ ಕಟ್ಟುಪಾಡು' ಅವರ ಅಂಕಣ ಬರಹಗಳ ಸಂಕಲನಗಳಾದರೆ, 'ಸಾಂಚಿಮುದ್ರೆ', 'ಪಟ್ಟಣ ಪುರಾಣ' ಅವರ ಪ್ರಬಂಧ ಸಂಗ್ರಹಗಳು. 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ 75' ಕವನ ಸಂಕಲನಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.